**ಓ.ಎಸ್ ನಂ.120/2023 ಪಿ.ಡಬ್ಲ್ಯೂ-1 (ಗಾಯಿತ್ರಿ)**

**ಸಾಕ್ಷಿಯನ್ನು ದಿನಾಂಕಃ 06.01.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ 10 ಮತ್ತು 11 ರವರ ಪರ ವಕೀಲರಾದ ಶ್ರೀ ಬಿ ಎಸ್ ಎಸ್ ವಕೀಲರಿಂದಃ**

ನಾನು ಹಾಜರುಪಡಿಸಿದ ನಿಪಿ 6 ಶಾಲಾ ದಾಖಲಾತಿ ದೃಡೀಕರಣ ಪತ್ರದಲ್ಲಿ ಕಾಲಂ ನಂ 8 ಮತ್ತು 11 ಖಾಲಿ ಇರುತ್ತವೆ ಎಂದರೆ ಸರಿ. ಅದೇ ರೀತಿ ಕಾಲಂ ನಂ. 5 ಮತ್ತು 10 ರಲ್ಲಿ ನಾಗಶೆಟ್ಟಿ ಹೆಸರಿನ ಹಿಂಭಾಗದಲ್ಲಿ ಹೆಚ್ ಎನ್ ಎಂದು ಸೇರಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ, ಸಾಕ್ಷಿಯು ಮುಂದುವರಿದು ಶಾಲೆಯವರು ಏನು ಕೊಟ್ಟಿರುತ್ತಾರೆ ಅದನ್ನು ತಂದು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 7 ರಲ್ಲಿ ಕಾಲಂ ನಂ.2 ರಲ್ಲಿ ವಿದ್ಯಾರ್ಥಿಯ ಹೆಸರು ಹೇಮಾಕ್ಷಮ್ಮ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ದಾವಾಪತ್ರದಲ್ಲಿ 2 ನೇ ವಾದಿಯ ಹೆಸರನ್ನು ಹೇಮಾ ಎಂದು ತೋರಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮ್ಮ ತಂದೆಯವರು ಶಾಲೆಗೆ ಸೇರಿಸುವ ಸಮಯದಲ್ಲಿ ಏನು ಹೆಸರನ್ನು ನೀಡಲಾಗಿರುತ್ತದೆಯೋ ಅದನ್ನು ಶಾಲಾ ದಾಖಲಾತಿಯಲ್ಲಿ ಸೇರಿಸಲಾಗಿರುತ್ತದೆ. ಈಗ ಏನು ಕರೆಯುತ್ತವೆಯೋ ಆ ಹೆಸರನ್ನು ತೋರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ನಿಪಿ 8 ರಲ್ಲಿ ಕಾಲಂ ನಂ.2 ರಲ್ಲಿ ವಿದ್ಯಾರ್ಥಿಯ ಹೆಸರು ಗಾಯತ್ರಮ್ಮ ಎಂದು ಇರುತ್ತದೆ ದಾವಾ ಪತ್ರದಲ್ಲಿ ಶ್ರೀಮತಿ ಗಾಯಿತ್ರಿ ಎಂದು ಇರುತ್ತದೆ ಎಂದರೆ ಸರಿ ಸಾಕ್ಷಿಯು ಮುಂದುವರಿದು ಶಾಲಗೆ ಸೇರಿಸುವ ಸಮಯದಲ್ಲಿ ಆಕೆಯ ಹೆಸರನ್ನು ಗಾಯತ್ರಮ್ಮ ಎಂದು ನೀಡಲಾಗಿರುತ್ತದೆ ಆಕೆಯ ಹೆಸರನ್ನು

ಗಾಯಿತ್ರಿ ಎಂದು ಕರೆಯಲಾಗುತ್ತದೆ  ಎಂದು ನುಡಿಯುತ್ತಾರೆ. ವಾದಿ 1 ರವರು ಶಾಲೆಗೆ ಹೋಗಿರುವುದಿಲ್ಲ ಆದುದ್ದರಿಂದ ನಿಪಿ 6 ರ ಕಾಲಂ 8 ಮತ್ತು 11 ರಲ್ಲಿ ಖಾಲಿ ಇರುತ್ತದೆ ಮತ್ತು  ಸದರಿ ದಾಖಲಾತಿಯನ್ನು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ 7 ಮತ್ತು 8 ದಾಖಲಾತಿಗಳು ನಿಮಗೆ ಸಂಬಂದಪಟ್ಟಿರುವುದಿಲ್ಲ ಅವುಗಳನ್ನು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾವುಗಳು ಹೆಚ್ ಎನ್  ನಾಗಶೆಟ್ಟಿ ರವರ ವಾರಸುದಾರರು ಎಂದು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿಂದ ಆಧಾರ್ ಕಾರ್ಡ್ ಮತ್ತು ಶಾಲಾ ದಾಖಲಾತಿ ಯನ್ನು ಹಾಜರುಪಸಿರುತ್ತೇನೆ ಎಂದು ನುಡಿಯುತ್ತಾರೆ.  ನೀವು ಹಾಜರುಪಡಿಸಿರುವ ಆಧಾರ್ ಕಾರ್ಡಿನಲ್ಲಿ ನಿಮ್ಮ ನಿಮ್ಮ ಗಂಡಂದಿರುಗಳ ಹೆಸರು ಮತ್ತು ವಿಳಾಸ ವನ್ನು ತೋರಿಸಲಾಗಿರುತ್ತದೆಯೇ ವಿನಾಃ ನೀವುಗಳು ಹೆಚ್ ಎನ್ ನಾಗಶೆಟ್ಟಿ ರವರ ವಾರಸುದಾರರು ಎಂದು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವುಗಳು ಹೆಚ್ ಎನ್ ನಾಗಶೆಟ್ಟಿ ರವರ ವಾರಸುದಾರರಾಗಿಲ್ಲದೆ ಇದ್ದರು ಸಹ ಅವರ ಆಸ್ತಿಯನ್ನು ಲಪಟಾಯಿಸಲು ಅವರ ವಾರಸುದಾರರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ